# ವಿಜ್ಞಾನ ಮಂಟಪ
# “ಪೇರಲ : ಬೆಳೆ ಮತ್ತು ಔಷಧೀಯ ಬಳಕೆ”




## ರೈತರಿಗೆ ‘ಕ್ಯಾಶ ಬುಕ್’ ಪರಂಪರೆ ಬೇಕೇ ಬೇಕು

ಧಾರವಾಡ : ತೋಟಗಾರಿಕೆ ಮತ್ತು ಕೃಷಿಯನ್ನು ರೈತರು ಉದ್ದಿಮೆ ಎಂದು ಭಾವಿಸಿ ಲಾಭ, ಹಾನಿಯ ಮುನ್ನೋಟದಲ್ಲಿ ‘ಕ್ಯಾಶ ಬುಕ್’ ಪರಂಪರೆಯನ್ನು ಪ್ರಾರಂಭಿಸಬೇಕೆಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಡಾ. ರಾಮಚಂದ್ರ ಮಡಿವಾಳ ಸಲಹೆ ನೀಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ವಿಜ್ಞಾನ ಮಂಟಪದ ಆಶ್ರಯದಲ್ಲಿ **“ಪೇರಲ : ಬೆಳೆ ಮತ್ತು ಔಷಧೀಯ ಬಳಕೆ”** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸ್ಲೈಡ್ ಪ್ರದರ್ಶನ ಮಾಡುತ್ತಾ ಅವರು ಮಾತನಾಡುತ್ತಿದ್ದರು.

ಕೃಷಿಕರು ಅರ್ಥಶಾಸ್ತ್ರವನ್ನು ಅವಲಂಬಿಸದೇ ಹೋದರೆ ಉಳಿಗಾಲವೇ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು, ಬೆಳೆಗಾರರಾಗುವಲ್ಲಿ ತೋರುವ ಉತ್ಸಾಹವನ್ನು ತಮ್ಮದೆ ಸರಕು ಮಾರಾಟ ಆಗುವಲ್ಲಿ ಆಲಸ್ಯ ಧೋರಣೆ ತೋರುತ್ತಾರೆ ಎಂದು ವಿಷಾದಿಸಿದರು. ತೋಟಗಾರಿಕೆ ಬೆಳೆಯ ಉಪಯೋಗದ ವಿಸ್ತಾರ ದಿನೇ ದಿನೇ ಹೆಚ್ಚುತ್ತಲೇ ಇದೆ. ಈ ಹಿನ್ನಲೆಯಲ್ಲಿ ಪೇರಲವೂ ಸೇರಿದಂತೆ ಉಳಿದ ಹಣ್ಣುಗಳ ಸಂಸ್ಕರಣೆ ಬಗ್ಗೆ ಪರಿಜ್ಞಾನವೂ ಬೇಕು, ಜೊತೆಗೆ ಇಂತಹ ಘಟಕಗಳ ಸಂಗಡ ವ್ಯವಸ್ಥಿತ ಆರ್ಥಿಕ ಆಗುಹೋಗುಗಳು ಬೇಕು ಎಂದು ನುಡಿದರು.

**ನವಲೂರು ಪೇರಲ :** ಬಹು ಸಾಂದ್ರತೆಯ (ಹೈ ಡೆನ್‌ಸಿಟಿ) ಪೇರಲ ಇಂದು ಬಹಳ ಬೇಡಿಕೆಯಲ್ಲಿರುವ ಹಣ್ಣು. ಇದರ ಬೆಳೆಯಲ್ಲಿ ಸತತವಾಗಿ ಸಂಶೋಧನೆಗಳು ನಡೆಯುತ್ತಲೇ ಇವೆ. ಈ ಸಸ್ಯಕ್ಕೆ ಪ್ಲಾಸ್ಟಿಕ ಹೊದಿಕೆ ಮತ್ತು ಆಗಾಗ ಕಟಾವು ಮಾಡುವ ಮಹತ್ವವನ್ನು ರೈತರು ತಿಳಿದುಕೊಳ್ಳಲೇ ಬೇಕು. ಇದಲ್ಲದೆ ಅತ್ಯವಶ್ಯವಾಗಿ ಹನಿ ನೀರಾವರಿಯ ಬಳಕೆಯನ್ನು ಮಾಡಲೇಬೇಕಾಗುತ್ತದೆ ಧಾರವಾಡ ಜಿಲ್ಲೆ ಪೇರಲ ಬೆಳೆಗೆ ಅತ್ಯುತ್ತಮ ವಾತಾವರಣ ಹೊಂದಿದೆ. ಆದರೆ ರಾಷ್ಟ್ರೀಯ ಖ್ಯಾತಿಯ ನಮ್ಮದೆ ಆದ ನವಲೂರು ಪೇರಲ ನಿಧಾನಕ್ಕೆ ಕಣ್ಮರೆ ಆಗುತ್ತಿದ್ದದ್ದು ಕಳವಳಕಾರಿ. ನವಲೂರು ಅಷ್ಟೇ ಅಲ್ಲ ನಮ್ಮ ರಾಜ್ಯದಲ್ಲಿಯ ಕಲಾದಗಿ, ಲೋಕಾಪುರ, ಕೊಣ್ಣೂರ, ಬಾಗಲಕೋಟೆ ಮತ್ತಿತರ ಕಡೆಗೆ ಇರುವ ಸ್ಥಳೀಯ ಪೇರಲವೂ ಸಹ ಕಣ್ಮರೆಯಾಗುತ್ತಿದ್ದು ಅದರ ಅಭಿವೃದ್ಧಿ ಇಂದಿನ ಕಾಲಮಾನಕ್ಕೆ ತಕ್ಕಂತೆ ಹೆಚ್ಚಿನ ಇಳುವರಿ ಕೊಡುವಲ್ಲಿ ಸಫಲ ಆಗಬೇಕಾಗುತ್ತದೆ ಎಂದು ಡಾ. ರಾಮಚಂದ್ರ ಮಡಿವಾಳ ಅಭಿಪ್ರಾಯಪಟ್ಟರು.

**ಔಷಧಿಯ ಆಗರ ಪೇರಲ :** ಪೇರಲದ ಹಣ್ಣು, ತೊಗಟೆ, ಮುಗುಳು, ಹಸಿರೆಲೆ ಇವೆಲ್ಲವೂ ಸೇರಿದಂತೆ ಸರ್ವಾಂಗೀಣ ಸಸ್ಯವೇ ಹಲವಾರು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ ಎಂದು ಕಿಟೆಲ್ ಸಾಯನ್ಸ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಡಾ. ಆರ್. ವಾಯ್. ಕಟ್ಟಿ ಹೇಳಿದರು.

ಪೇರಲ, ಕ್ಯಾನ್ಸರ ಸೇರಿದಂತೆ ಗಡ್ಡೆಗಳನ್ನು ನಿವಾರಿಸುವ ಗುಣ ಹೊಂದಿದೆ. ಇದರಲ್ಲಿ ಪೋಟ್ಯಾಷಿಯಂ ಹೇರಳವಾಗಿ ಇರುವುದರಿಂದ ರಕ್ತದ ಒತ್ತಡ ಸ್ಥಿರಗೊಳ್ಳುತ್ತದೆ, ಮಲಬದ್ಧತೆ ನಿವಾರಣೆಗೊಳ್ಳುತ್ತದೆ, ಕಣ್ಣು ಮತ್ತು ಹಲ್ಲುನೋವಿಗೆ ಪೇರಲ ಕಷಾಯ ಅತ್ಯುತ್ತಮ. ಪೇರಲದ ಮುಗುಳನ್ನು ತಿಂದರೆ ಸಕ್ಕರೆ ರೋಗ ಹತೋಟಿಯಲ್ಲಿ ಬರುತ್ತದೆ. ಹೀಗೆ ಪೇರಲದ ನಾನಾ ವಿಧದ ಔಷಧಿಯ ಉಪಯೋಗವನ್ನು ಡಾ. ಕಟ್ಟಿಯವರು ಸ್ಲೈಡ್‌ಗಳ ಮೂಲಕ ವಿವರಿಸಿದರು. ಪೇರಲ ತಿಂದರೆ ನೆಗಡಿ ಆಗುತ್ತಿದೆ ಎಂಬ ಕೆಲವರ ನಂಬಿಕೆ ಸರಿಯಲ್ಲ. ಈ ಬಗ್ಗೆ ಇಲ್ಲಿಯ ತನಕ ಆದ ಸಂಶೋಧನೆಗಳು ಇದನ್ನು ದೃಢಪಡಿಸಿಲ್ಲ ಎಂದರು.

ಪೇರಲ ಮತ್ತು ಬೆಳೆಗಾರರ ವಿಷಯದ ಬಗ್ಗೆ ಪ್ರಗತಿಪರ ರೈತ ಮತ್ತು ಎಸ್.ಎಸ್.ಎಲ್.ಸಿ.ಬಂಧು ಸಂಪಾದಕ ಬಸವರಾಜ ವಿಭೂತಿಯವರು ಮಾತನಾಡಿ, ಇಂದಿನ ಮಣ್ಣಿನ ದುಸ್ಥಿತಿಯನ್ನು ಕರುಣಾಜನಕವಾಗಿ ವರ್ಣಿಸಿದರು. ಇಂದು ಸಿಗುವ ಸರಾಸರಿ ಒಂದು ಗ್ರಾಮ್ ಮಣ್ಣಿನಲ್ಲಿ ಬರೀ ಇಪ್ಪತ್ತು ಲಕ್ಷ ಜೀವ ಕಣಗಳು ಇವೆ. ನ್ಯಾಯವಾಗಿ ಇದು ಮೂರು ಕೋಟಿ ಇರಬೇಕಾಗಿತ್ತು ಎಂಬುದನ್ನು ಗಮನಕ್ಕೆ ತಂದ ವಿಭೂತಿಯವರು ಅತಿಯಾದ ರಾಸಾಯನಿಕ ಬಳಕೆಯಿಂದ ಭೂಮಿ ಬಂಜರಾಗಿದೆ. ಇದರ ಬದಲು ಸಾವಯವ ಪದ್ಧತಿ ಅವಶ್ಯ ಬೇಕೇ ಬೇಕು ಎಂದರು. ಪೇರಲದ ಕೃಷಿಯನ್ನು ನವೀನ ಹಾಗೂ ಇಸ್ರೇಲ್ ಮಾದರಿ ತಂತ್ರಜ್ಞಾನದಿಂದ ಮಾಡಿದಲ್ಲಿ ಪ್ರತಿ ಎಕರೆಗೆ ಐದು ಲಕ್ಷ ರೂ. ಕನಿಷ್ಠ ಲಾಭ ಸಿಗುತ್ತದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕ.ವಿ.ವ.ಸಂಘದ ಸಹಕಾರ್ಯದರ್ಶಿ ಮತ್ತು ಪ್ರಗತಿಪರ ರೈತರಾದ ಸದಾನಂದ ಶಿವಳ್ಳಿಯವರು ಮಾತನಾಡಿ, ಜೈವಿಕ ಕೃಷಿಯ ಬಗ್ಗೆ ಆಲೋಚನೆ ಮಾಡುವುದಕ್ಕಿಂತ ಕಾರ್ಯರೂಪಕ್ಕೆ ಇಳಿಯುವದು ಸೂಕ್ತ ಆಗಿದೆ. ಪ್ರಾಯೋಗಿಕವಾಗಿ ತಮ್ಮ ಹೊಲದಲ್ಲಿ ಸಾವಯವ ಕೃಷಿ ಪದ್ಧತಿಯಿಂದ ಮಾಡುತ್ತಿರುವ ಸಸ್ಯ ಮತ್ತು ಇತರ ಬೆಳೆಗಳ ಕುರಿತು ಮಾಹಿತಿ ನೀಡಿದರು.

ಕೃಷಿ ವಿ.ವಿ.ಯ ನಿವೃತ್ತ ವಿಜ್ಞಾನಿ ಪ್ರೊ. ಆರ್. ಪರಮೇಶ್ವರಪ್ಪ ಅವರು ಮಾತನಾಡಿ, ಕೃಷಿ ಕ್ರಾಂತಿಯಲ್ಲಿ ಸಾವಯವ ಕೃಷಿಯ ಮಾರ್ಗ ಈಗ ಉಳಿದ ಒಂದೇ ದಾರಿಯಾಗಿದೆ ಎಂದರು. ‘ಜನ್ಮಭೂಮಿ ಉಳಿಸಿರಿ’ ಆಂದೋಲನದ ಧುರೀಣ

ಶಿರಸಿಯ ಅನಿಲಕುಮಾರ ಅವರು ಮಾತನಾಡಿ, ಸಾವಯವ ಕೃಷಿ ಎಂಬುದು ಈಗ 'ಟ್ರೇಡ್ ನೇಮ್' ಆಗಿರುವುದರಿಂದ ಇದರಲ್ಲಿಯೂ ಕೂಡ ಕಲಬೇರಿಕೆಯ ಸಾಧ್ಯತೆ ಅಧಿಕವಾಗಿದೆ ಎಂಬ ಆತಂಕ ವ್ಯಕ್ತಪಡಿಸಿದರು. ಅಪ್ಪಟ ಸಾವಯವ ಪದ್ಧತಿಯಿಂದ ರೈತ ಕೃಷಿ ಮಾಡಿದಲ್ಲಿ ಕಾಲಾಂತರದಲ್ಲಿ ಸಾಲದಿಂದ ಮುಕ್ತಿ ಹೊಂದಿ ಸರಕಾರಕ್ಕೇ ಸಾಲ ಕೊಡುವ ಸುದಿನಗಳು ಬಂದೇ ಬರುತ್ತಿವೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತ ಭಾಷಣ ಮಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಕ.ವಿವ.ಸಂಘದ ವಿಜ್ಞಾನ ಮಂಟಪದ ಸಂಚಾಲಕ ಮನೋಜ ಪಾಟೀಲ ಅವರು, ಪೇರಲ ಬಹು ಮಹತ್ವದ ಮತ್ತು ಕಡಿಮೆ ನೀರು ಬೇಡುವ ಜೊತೆಗೆ ಅತ್ಯಧಿಕ ಇಳುವರಿ ಕೊಡುವ ಸಸ್ಯವಾಗಿದ್ದು, ಈ ಬಗ್ಗೆ ಇನ್ನಷ್ಟು ಸಂಶೋಧನೆಗಳು ಹೆಚ್ಚಿ ಸದಾಕಾಲವೂ ಪೇರಲ ಹಣ್ಣು ನೀಡುವ ಕ್ರಮಗಳು ಸಫಲ ಆಗಬೇಕಾಗಿದೆ ಎಂದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಸಹಾಯಕ ತೋಟಗಾರಿಕೆ ಜಿಲ್ಲಾ ಅಧಿಕಾರಿ ಪ್ರವೀಣ, ವಿಜ್ಞಾನ ಮಂಟಪದ ಸಲಹಾ ಸಮಿತಿ ಸದಸ್ಯರಾದ ಗೋಪಾಲ ಖಾಸನೀಸ, ಮಹಾಂತೇಶ ನರೇಗಲ್ಲ, ಕೃಷಿ ವಿಜ್ಞಾನಿ ವಿಜಯಕುಮಾರ ಗಿಡ್ನವರ ದಂಪತಿಗಳು, ಎಸ್. ಜಿ. ಪಾಟೀಲ, ಕೃಷಿ ತಜ್ಞ ಡಾ. ಪರಮೇಶ್ವರಪ್ಪಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ವೀರಣ್ಣ ಒಡ್ಡೀನ ಆಭಾರ ಮನ್ನಿಸಿದರು.

**ಪ್ರಕಾಶ ಎಸ್. ಉಡಿಕೇರಿ**
ಪ್ರಧಾನ ಕಾರ್ಯದರ್ಶಿಗಳು
ಮೊ: ೯೪೪೮೧-೪೬೮೨೧